# ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಳೂರು

**ಅಂಚೆ ಚಾರ್ಲ, ವಯ ಮಂಜೇಶ್ವರ – 671323**

# ಅಕಾಡೆಮಿಕ್ ಮಾಸ್ಟರ್ ಪ್ಲಾನ್

# 2025-26

# ಮುನ್ನುಡಿ

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕುಳೂರು ಪ್ರಕೃತಿ ಸೌಂದರ್ಯದಿಂದ ಕೂಡಿದ ಶೈಕ್ಷಣಿಕ ಕೇಂದ್ರವಾಗಿದೆ. ಸುತ್ತಲೂ ಗುಡ್ಡ, ಗದ್ದೆ, ನದಿ-ತೋಡುಗಳಿಂದ ಕೂಡಿದ್ದು ನಿಸರ್ಗದ ಮಡಿಲಲ್ಲಿ ತಲೆಯೆತ್ತಿ ನಿಂತಿದೆ. ಇಲ್ಲಿನ ಹಿರಿಯರ ಸಹಕಾರದಿಂದ 10-02-1924 ರಲ್ಲಿ ಸ್ಥಾಪಿತವಾದ ಈ ವಿದ್ಯಾಕೇಂದ್ರವು ಬಳಿಕ 22-10-1982 ರಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ ಪುನರ್ ನಿರ್ಮಾಣಗೊಂಡಿತು. ಪ್ರಸ್ತುತ ಈ ಶಾಲೆಯು ಮೀಂಜ ಗ್ರಾಮ ಪಂಚಾಯತಿನಲ್ಲಿದ್ದು IX ನೇ ವಾರ್ಡಿನಲ್ಲಿದ್ದು ಸುಮಾರು ಒಂದೂವರೆ ಎಕರೆ ವಿಸ್ತೀರ್ಣದಲ್ಲಿ ನೆಲೆಗೊಂಡಿದೆ.

ತೀರಾ ಹಿಂದುಳಿದ ಪ್ರದೇಶವಾದ ಕುಳೂರು ಜನರ ಅನಕ್ಷರತೆ, ಬಡತನ ಮೊದಲಾದ ಪಿಡುಗನ್ನು ತೊಡೆದು ಹಾಕಲು ಇಲ್ಲಿನ ಕೆಲವು ಹಿರಿಯ ವಿದ್ಯಾಭಿಮಾನಿಗಳ ಮುತುವರ್ಜಿಯಿಂದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯು ಮಂಜೂರಾಗಲು ಸಾಧ್ಯವಾಯಿತು. ಸುಮಾರು ಹತ್ತು ದಶಕಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯನ್ನು ನೀಡುತ್ತಾ ಬಂದಿರುವ ಈ ಶಾಲೆಯು ಕಳೆದ ವರ್ಷ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದೆ.. ಶಾಲಾ ಪಿ.ಟಿ.ಎ, ಹಳೆ ವಿದ್ಯಾರ್ಥಿ ಸಂಘ ಹಾಗೂ ಊರ ವಿದ್ಯಾಭಿಮಾನಿಗಳ ಸಹಕಾರದೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಆರಂಭದಲ್ಲಿ ಕೆಲವೇ ಮಕ್ಕಳಿಂದ ಆರಂಭಗೊಂಡ ಈ ಶಾಲೆಯು ಕ್ರಮೇಣ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯು ಹೆಚ್ಚುತ್ತಾ ಹೋಗಿ 4 ಮಂದಿ ಅಧ್ಯಾಪಕರನ್ನು ಒಳಗೊಂಡಿತ್ತು. ಕ್ರಮೇಣ ಆಂಗ್ಲ ಮಾಧ್ಯಮ ಶಾಲೆಗಳ ಪೈಪೋಟಿಯಿಂದ ನಲುಗಿದ ಸಂಸ್ಥೆಯು ಮಕ್ಕಳ ದಾಖಲಾತಿಯಲ್ಲಿ ಗಣನೀಯ ಇಳಿಮುಖವನ್ನೂ ಕಂಡಿದೆ. ಹೀಗಾಗಿ ಮಕ್ಕಳ ದಾಖಲಾತಿಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಮುಖ್ಯೋಪಾಧ್ಯಾಯರು, ಸಹ ಅಧ್ಯಾಪಕರು, ಪಿ.ಟಿ.ಎ, ಶಾಲಾ ಹಳೆ ವಿದ್ಯಾರ್ಥಿ ಸಂಘ ಹಾಗೂ ಊರಿನ ವಿದ್ಯಾಭಿಮಾನಿಗಳ ಸಹಕಾರದೊಂದಿಗೆ ವಿವಿಧ ಶಾಲಾಭಿವೃದ್ಧಿ ಕಾರ್ಯಕ್ರಮಗಳನ್ನಿಟ್ಟು ಕಾರ್ಯವೆಸಗುತ್ತಿದ್ದು ಶಾಲೆಯನ್ನು ಯಶಸ್ವಿಯಾಗಿ ಮುನ್ನಡೆಸಲಾಗುತ್ತಿದೆ. ಈಗ ಊರಿನ ಅಭಿಮಾನದ ಶಿಕ್ಷಣ ಕೇಂದ್ರವಾಗಿ ಶಾಲೆಯು ಬದಲಾಗಿದ್ದು, ಮಕ್ಕಳ ದಾಖಲಾತಿಯಲ್ಲಿ ಗಣನೀಯ ಏರಿಕೆಯನ್ನು ಕಾಣುತ್ತಿದೆ. 2018 ರಲ್ಲಿ ಪ್ರೀ ಪ್ರೈಮರಿ ವಿಭಾಗವನ್ನೂ ಆರಂಭಿಸಲಾಗಿದ್ದು ಇದರ ಸಂಪೂರ್ಣ ಜವಾಬ್ದಾರಿಯನ್ನು ಕಳೆದ ವರ್ಷದ ವರೆಗೆ ಹಳೆ ವಿದ್ಯಾರ್ಥಿ ಸಂಘ ವಹಿಸಿಕೊಂಡಿದ್ದು, ಈ ವರ್ಷದಿಂದ ನಮ್ಮ ಶಾಲಾ ಹಳೆ ವಿದ್ಯಾರ್ಥಿ, ಹೇರಂಬ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ನ ಸ್ಥಾಪಕಾಧ್ಯಕ್ಷರಾದ ಶ್ರೀ ಸದಾಶಿವ ಕೆ ಶೆಟ್ಟಿ ಕುಳೂರು ಕನ್ಯಾನ ರವರು ಪ್ರೀ ಪ್ರೈಮರಿಯನ್ನು ದತ್ತು ಸ್ವೀಕಾರ ಮಾಡುವ ಮೂಲಕ ನಡೆಸಿಕೊಂಡು ಹೋಗಲಾಗುತ್ತದೆ.

ಶಾಲೆಯು ಎಲ್ಲಾ ತರದ ಸೌಲಭ್ಯಗಳನ್ನು ಹೊಂದಿಕೊಂಡಿದ್ದು ಶಾಲಾ ಮಕ್ಕಳಲ್ಲಿ ಜಾತಿ ಬೇಧವಿಲ್ಲದೆ ಐಕ್ಯತೆಯಿಂದ ಮುನ್ನಡೆಯುವ ಪ್ರತ್ಯೇಕತೆ ಈ ಶಾಲೆಗಿದೆ ಎಂದು ಹೇಳಲು ಹೆಮ್ಮೆ ಪಡುತ್ತೇವೆ.

# <u>ಅಕಾಡೆಮಿಕ್ ಮಾಸ್ಟರ್ ಪ್ಲಾನ್ 2025-26</u>

2025-26 ನೇ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಕಲಿಕಾಮಟ್ಟವನ್ನು ಅಭಿವೃದ್ಧಿ ಪಡಿಸಲು ಅಕಾಡೆಮಿಕ್ ಮಾಸ್ಟರ್ ಪ್ಲಾನ್ ಯೋಜನೆಯನ್ನು ರೂಪೀಕರಿಸಲಾಗಿದೆ. ಮಕ್ಕಳಲ್ಲಿ ಕಲಿಕಾ ಕೌಶಲ್ಯವನ್ನು ವೃದ್ಧಿಸಲು ವಿವಿಧ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಮಕ್ಕಳ ಕಲಿಕಾ ಮಟ್ಟದಲ್ಲಿ ಆದ ಏರು ಪೇರನ್ನು ಈ ವರ್ಷದ ಕಲಿಕಾ ಚಟುವಟಿಕೆಗಳಲ್ಲಿ ಬದಲಾವಣೆಯನ್ನು ತರಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಶಾಲೆಯ ಅಕಾಡೆಮಿಕ್ ಮಾಸ್ಟರ್ ಪ್ಲಾನ್ ಮಕ್ಕಳ ಕಲಿಕಾ ಮಟ್ಟದಲ್ಲಿ ಆದ ಎಡರು ತೊಡರುಗಳನ್ನು ನಿವಾರಿಸಿ ಕಲಿಕಾ ಕೌಶಲ್ಯವನ್ನು ವೃದ್ಧಿಸುವ ಸಲುವಾಗಿ ಮಾಡಿದ ಯೋಜನೆಯಾಗಿದೆ.

ಸಾಮಾನ್ಯವಾಗಿ ಕೆಲವು ಮಕ್ಕಳಿಗೆ ತಮ್ಮ ತರಗತಿ ಮಟ್ಟಕ್ಕನುಗುಣವಾಗಿ ಓದುವಿಕೆ ಹಾಗೂ ಬರವಣಿಗೆಯಲ್ಲಿ ಗುರಿ ತಲುಪಲು ಸಾಧ್ಯವಾಗದೇ ಇದ್ದುದರಿಂದ ಅದಕ್ಕಾಗಿ ಪ್ರತ್ಯೇಕ ಪರಿಗಣನೆಯ ಅಗತ್ಯವನ್ನು ಕಂಡುಕೊಂಡಿದ್ದೇವೆ.. ಮುಖ್ಯವಾಗಿ ಓದುವಿಕೆ ಮತ್ತು ಬರವಣಿಗೆಯಲ್ಲಿ ಇರುವ ಸಮಸ್ಯೆಗಳನ್ನು ತಿಳಿದುಕೊಂಡು ಅದಕ್ಕೆ ಪರಿಹಾರವಾಗಿ ಕೆಲವು ಮಾರ್ಗಗಳನ್ನು ಕಂಡುಕೊಂಡೆವು. ಎಲ್ಲಾ ವಿಷಯಗಳಲ್ಲೂ ಸಮಸ್ಯೆಗಳನ್ನು ಕಂಡುಕೊಂಡು ಅವುಗಳಿಗೆ ಪರಿಹಾರೋಪಾಯವಾಗಿ ಕೆಲವು ಚಟುವಟಿಕೆಗಳನ್ನು ನಿರ್ಧರಿಸಲಾಯಿತು. ಅದರಂತೆ ಪ್ರತೀ ತರಗತಿಗೂ ಪ್ರತ್ಯೇಕ ಯೋಜನೆಗಳನ್ನು ತಯಾರಿಸಲಾಯಿತು.

ಶಾಲಾ ಮಕ್ಕಳಿಗೆ ಮಾಡಿದ ಚಟುವಟಿಕೆಗಳು ಮಕ್ಕಳ ಕಲಿಕಾ ಮಟ್ಟವನ್ನು ತರಗತಿ ಮಟ್ಟಕ್ಕೆ ತರುವ ಉದ್ದೇಶದಿಂದಾಗಿದೆ. ಮುಖ್ಯವಾಗಿ ಓದುವಿಕೆ ಮತ್ತು ಬರವಣಿಗೆಗೆ ಹೆಚ್ಚು ಒತ್ತು ಕೊಟ್ಟು ಈ ಯೋಜನೆಯನ್ನು ತಯಾರಿಸಲಾಗಿದೆ.

**ವಿಷಯ : ಕನ್ನಡ**

| ಉದ್ದೇಶಗಳು | ಚಟುವಟಿಕೆಗಳು | ಕಾಲಾವಧಿ | ಜವಾಬ್ದಾರಿ | ಹಣಕಾಸು / ಬೆಂಬಲ |
|---|---|---|---|---|
| ವಿವಿಧ ಕವಿತೆ, ಕಥೆ, ಶಿಶುಗೀತೆ, ಅಭಿನಯ ಗೀತೆಗಳನ್ನು ರಾಗ, ತಾಳ, ಲಯಬದ್ಧವಾಗಿ ಹಾಡಲಿರುವ ಸಾಮರ್ಥ್ಯವನ್ನು ಬೆಳೆಸುವುದು. | ⁎ ಶಿಶುಗೀತೆ, ಅಭಿನಯ ಗೀತೆಗಳನ್ನು ಅಧ್ಯಾಪಕರು ಹಾಡುವುದು, ಮಕ್ಕಳಿಂದ ಹಾಡಿ ಸುವುದು.<br>⁎ ವಾರದಲ್ಲಿ ಒಂದು ದಿನ್ನು ಐಸಿಟಿ ಮುಖಾಂತರ ಅಭಿನಯ ಗೀತೆಯನ್ನು ತೋರಿಸುವುದು. ಜೊತೆಗೆ ಕಲಿಯುವುದು.<br>⁎ ತಿಂಗಳ ಕೊನೆಯಲ್ಲಿ ಉತ್ತಮ ಅಭಿನಯಗಾರ್ತಿ/ರ, ಹಾಡುಗಾರ್ತಿ/ರ ಆಯ್ಕೆ ಮಾಡಿ ಅಭಿನಂದಿಸುವುದು. | ಜೂನ್ & ಜುಲೈ | Class Teacher<br>Headmistress<br>SRG | ಎಸ್.ಆರ್.ಜಿ. |
| ವಾಚನಾ ಸಾಮರ್ಥ್ಯವನ್ನು ವೃದ್ಧಿಸುವುದು | * ಓದುವ ಮೂಲೆಯನ್ನು ಫಲಪ್ರದವಾಗಿ ಬಳಸುವುದು<br>⁎ ತರಗತಿ ಲೈಬ್ರರಿ ಸಜ್ಜೀಕರಣ<br>⁎ ತಿಂಗಳಿಗೊಮ್ಮೆ ಉತ್ತಮ ಓದುಗಾರರಿಂದ ಬಾಲ ಸಭೆಯಲ್ಲಿ ಕಥೆ, ವಾರ್ತಾಪತ್ರಿಕೆ ಎಂಬಿವುಗಳ ಓದುವಿಕೆ<br>⁎ ಗಟ್ಟಿ ಓದು: ಮಕ್ಕಳಿಂದ ಓದಿಸುವ ಚಟುವಟಿಕೆ | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು<br>ಲೈಬ್ರರಿ ಜವಾಬ್ದಾರಿ ಇರುವ ಅಧ್ಯಾಪಕರು | ಪಿ.ಟಿ.ಎ.<br>ಎಸ್.ಎಸ್.ಕೆ. |
| ಅಕ್ಷರ ತಪ್ಪಿಲ್ಲದ ಬರವಣಿಗೆಯನ್ನು ಪ್ರೋತ್ಸಾಹಿಸುವುದು | ⁎ ಒತ್ತಕ್ಷರಗಳ ಕಾರ್ಡು ತಯಾರಿ : ಒತ್ತಕ್ಷರಗಳನ್ನು ತುಂಡುಗಳಲ್ಲಿ ಬರೆದು ಅದರ ಹಿಂಭಾಗದಲ್ಲಿ ಅವು ಒಳಗೊಂಡ ಪದಗಳನ್ನು ಬರೆದು ವಿರಾಮದ ವೇಳೆಯಲ್ಲಿ ಪರಿಚಯಪಡಿಸುವುದು.<br>⁎ ನಿತ್ಯ ಜೀವನದಲ್ಲಿ ಕಂಡುಕೊಂಡಂತಹ ಘಟನೆಗಳನ್ನು ದಿನಚರಿಯ ಮೂಲಕ ವ್ಯಕ್ತಪಡಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ.<br>ಎಸ್.ಎಸ್.ಕೆ. |

| | | | | |
|---|---|---|---|---|
| | * ಪಾಠಭಾಗಗಳಲ್ಲಿ ಬರುವಂತಹ ವ್ಯವಹಾರ ರೂಪಗಳಿಗೆ ಮುಂದುವರಿಕಾ ಚಟುವಟಿಕೆಗಳನ್ನು ನೀಡುವುದು.<br>* ಸರಳವಾದ ವರ್ಕ್ ಶೀಟ್ ಗಳನ್ನು ನೀಡುವುದು. | | | |
| ಕಲೆ, ಸಾಹಿತ್ಯ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು. | * ಸ್ಥಳೀಯವಾಗಿ ಲಭ್ಯವಾಗುವಂತಹ ಉಪಕರಣಗಳನ್ನು ಬಳಸಿಕೊಂಡು ರಾಗ, ತಾಳ, ಲಯಬದ್ಧವಾಗಿ ಪದ್ಯಗಳನ್ನು ಹಾಡುವುದು.<br>* ಕಲೆ, ಸಾಹಿತ್ಯ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು<br>* ರೀಡರ್ಸ್ ಥಿಯೇಟರ್ : ಪಾಠಭಾಗ ಹಾಗೂ ಲೈಬ್ರರಿ ಪುಸ್ತಕದಲ್ಲಿರುವ ಕಥೆ, ಸಂಭಾಷಣೆ, ಕಿರುನಾಟಕ ಎಂಬಿವುಗಳ ಮಂಡನೆ / ಪ್ರದರ್ಶನ<br>* ಮಕ್ಕಳ ಸೃಜನಾತ್ಮಕ ಸೃಷ್ಟಿಯನ್ನು ಪ್ರದರ್ಶಿಸಲು ತರಗತಿಯಲ್ಲಿ stars and creativity<br>* ತಿಂಗಳಿಗೊಮ್ಮೆ ಮಕ್ಕಳ ಬಾಲ ಸಭೆ | ಜೂನ್ - ಮಾರ್ಚ್ | ಮುಖ್ಯ ಶಿಕ್ಷಕಿ ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಕಲಿಕೆಯು ಐ.ಸಿ.ಟಿ. ಯ ಮೂಲಕ | *ಪಾಠ ಭಾಗಗಳಿಗೆ ಸಂಬಂಧಿಸಿದ ವಿವಿಧ ವೀಡಿಯೋಗಳ ಸಂಗ್ರಹ ಹಾಗೂ ಪ್ರದರ್ಶನ | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಸ್ಥಳೀಯಾಡಳಿತ ಸಂಸ್ಥೆ |

## ವಿಷಯ : ಪರಿಸರ ಅಧ್ಯಯನ

| ಉದ್ದೇಶಗಳು | ಚಟುವಟಿಕೆಗಳು | ಕಾಲಾವಧಿ | ಜವಾಬ್ದಾರಿ | ಹಣಕಾಸು |
|---|---|---|---|---|
| ಪರಿಸರ ಅಧ್ಯಯನ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು. | * ಪಾಠಭಾಗಕ್ಕೆ ಸಂಬಂಧಿಸಿದ ವಾರ್ತೆಗಳು, ಚಿತ್ರಗಳು, ವೀಡಿಯೋಗಳನ್ನು ಐಸಿಟಿಯ ಮೂಲಕ ಪ್ರದರ್ಶಿಸುವುದು. | ಜೂನ್- ಮಾರ್ಚ್ | ತರಗತಿ ಅಧ್ಯಾಪಕರು | ಸ್ಥಳೀಯಾಡಳಿತ ಸಂಸ್ಥೆ ಎಸ್.ಎಸ್.ಕೆ |

| | | | | |
|---|---|---|---|---|
| ಲಘು ಪ್ರಯೋಗಗಳಲ್ಲಿ ಆಸಕ್ತಿ ಮೂಡಿಸುವುದು | * ಉಪಕರಣಗಳನ್ನು ಬೆಳಸಿಕೊಂಡು ಲಘು ಪ್ರಯೋಗಗಳನ್ನು ಮನೆಯಲ್ಲಿ ಮಾಡಿ ಅವುಗಳ ವೀಡಿಯೋವನ್ನು ವಾಟ್ಸಾಪ್ ಗ್ರೂಪಿಗೆ ರವಾನಿಸುವಂತೆ ಹೇಳುವುದು, ಅಭಿನಂದನೆ ಸಲ್ಲಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಪರಿಸರ ಅಧ್ಯಯನ ಕಲಿಕೆಯನ್ನು ಸುಗಮ ಹಾಗೂ ರಸವತ್ತಾಗಿಸುವುದು. | * ಪರಿಸರ ಅಧ್ಯಯನ ಕಲಿಕೆಗೆ ಅಗತ್ಯವಾದ ಉಪಕರಣಗಳ ತಯಾರಿ ಹಾಗೂ ಪ್ರಯೋಗಗಳನ್ನು ಆಯೋಜಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ವೈಜ್ಞಾನಿಕ ತಿಳುವಳಿಕೆಯನ್ನು ಉಂಟುಮಾಡುವುದು. | * ಪ್ರಯೋಗದ ಮೂಲಕ ವೈಜ್ಞಾನಿಕ ತತ್ವಗಳನ್ನು ತಿಳಿದುಕೊಳ್ಳುವುದು. ಪ್ರಯೋಗದ ಟಿಪ್ಪಣಿ ಬರೆಯುವುದು. ವಿಜ್ಞಾನಿಗಳ ಕಿರು ಪರಿಚಯ ಐಸಿಟಿಯ ಮೂಲಕ | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ನಿರೀಕ್ಷಣೆ ಹಾಗೂ ಜ್ಞಾನ ನಿರ್ಮಾಣ | * ಪಾಠಭಾಗಕ್ಕೆ ಸಂಬಂಧಿಸಿ ಅನುಯೋಗ್ಯವಾದ ಸಮಯಗಳಲ್ಲಿ ಬಯಲು ಪ್ರವಾಸ ಕೈಗೊಳ್ಳುವುದು, ನುರಿತರೊಂದಿಗೆ ಸಂದರ್ಶನ. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಪರಿಸರ ಅಧಯನ ಕಲಿಕೆಯಲ್ಲಿ ಗಳಿಸಿದ ಜ್ಞಾನದ ಪ್ರಕಟನೆ | ಶಾಸ್ತ್ರೋತ್ಸವ : ಹಸ್ತಪತ್ರಿಕೆ, ಭಿತ್ತಿಪತ್ರಿಕೆ, ಆಲ್ಬಂ ಕಲಿಕೋಪಕರಣ, ಲಘು ಪ್ರಯೋಗಗಳ ಪ್ರದರ್ಶನ. | ವರ್ಷಾಂತ್ಯದಲ್ಲಿ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |

## ವಿಷಯ : ಗಣಿತ

| ಉದ್ದೇಶಗಳು | ಚಟುವಟಿಕೆಗಳು | ಕಾಲಾವಧಿ | ಜವಾಬ್ದಾರಿ | ಹಣಕಾಸು |
|---|---|---|---|---|
| ಗಣಿತ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು. | * ಗಣಿತಾಶಯ ಒಳಗೊಳ್ಳುವ ಆಟಿಕೆಗಳನ್ನು ತಯಾರಿಸಿ ಹಾಗೂ ಸಂಗ್ರಹಿಸಿ ಗಣಿತ ಪೆಟ್ಟಿಗೆಯಲ್ಲಿ ಇರಿಸುವುದು. ಸಮಯಬಂಧಿತವಾಗಿ ಉಪಯೋಗಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಉಲ್ಲಾಸ ಗಣಿತ, ಮೋಜಿನ ಗಣಿತ | * ಮಧ್ಯಾಹ್ನ ವಿರಾಮದ ವೇಳೆಯಲ್ಲಿ ದಿನದಲ್ಲಿ ಒಂದು ಗಣಿತ ಲೆಕ್ಕಗಳನ್ನು ಕೊಟ್ಟು ಅದಕ್ಕೆ ಬೇಕಾದ ಕಲಿಕೋಪಕರಣಗಳನ್ನು ಕೊಟ್ಟು ಇನ್ನಷ್ಟು ಆಸಕ್ತಿದಾಯಕವಾಗಿಸುವುದು. | ಜೂನ್ - ಮಾರ್ಚ್ | Class Teacher<br>Headmistress<br>SRG | ಪಿ.ಟಿ.ಎ. ಎಸ್.ಎಸ್.ಕೆ. |
| ಗಣಿತ ಕಲಿಕೆಯನ್ನು ಸುಗಮಗೊಳಿಸುವುದು. | * ಗಣಿತ ಲ್ಯಾಬ್ ಸಜ್ಜೀಕರಿಸುವುದು. ಸಂದರ್ಭಕ್ಕನುಗುಣವಾಗಿ ಸೂಕ್ತವಾದ ಉಪಕರಣಗಳನ್ನು ಕಲಿಕೆಗೆ ಉಪಯೋಗಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಗಣಿತ ಕಲಿಕೆಯನ್ನು ವೃತ್ತಿ ಪರಿಚಯ ಕಲಿಕೆಯೊಂದಿಗೆ ಸಂಯೋಜಿಸುವುದು. | * ಒರಿಗಾಮಿ ಕಲಿಕೆ<br>* ವಿವಿಧ ಆಕೃತಿಗಳನ್ನು ಒಳಗೊಂಡ ಜ್ಯಾಮಿತಿಯ ರೂಪಗಳ ನಿರ್ಮಾಣ ಹಾಗೂ ಪ್ರದರ್ಶನ. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಗಣಿತ ಕಲಿಕೆಯು ಐಸಿಟಿಯ ಮೂಲಕ | * ಆಟದ ಪೆಟ್ಟಿಗೆಯಲ್ಲಿರುವ ಗಣಿತಕ್ಕೆ ಸಂಬಂಧಿಸಿದ ಆಟಗಳನ್ನು ಸಮಯಬಂಧಿತವಾಗಿ ಪರಿಚಯಿಸುವುದು. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |
| ಆರ್ಜಿಸಿದ ಗಣಿತ ಸಾಮರ್ಥ್ಯಗಳನ್ನು ಹೊರಹೊಮ್ಮಿಸುವುದು | * ಗಣಿತ ಮೇಳ : ರಸಪ್ರಶ್ನೆ ಮೋಜಿನ ಗಣಿತ, ನಮೂನೆ, ಕಲಿಕಾ ಉತ್ಪನ್ನಗಳ ಪ್ರದರ್ಶನ. | ಜೂನ್ - ಮಾರ್ಚ್ | ತರಗತಿ ಅಧ್ಯಾಪಕರು | ಪಿ.ಟಿ.ಎ. ಎಸ್.ಎಸ್.ಕೆ. |

**Subject : English**

| OBJECTIVES | ACTIVITIES | DURATION | RESPONSIBILITY | FUND |
|---|---|---|---|---|
| Introduce the speech bubbles | * Write the self introduction about the children in speech bubbles and paste it on the classroom wall.<br>* Follow me if you can: To follow the directions giving in English. | June 1 week<br><br>English period | Class teacher | P T.A.<br>S.S.K. |
| Improve listening and speaking skills | * Everyday after afternoon English speaking<br>* English balasaba<br>* Follow me if you can: to follow the direction giving in English<br>* Story telling, English rhymes, conversation, etc | Once in a month<br><br>Once in a week | Class teacher | P T.A.<br>S.S.K. |
| To develop reading skills | * Arrange the Class library<br>* Set the reading materials at reading corner.<br>* Reader's Theatre<br>* Let's make a sound: a corner in the classroom to improve reading skills through the sounds of a letter<br>* Loud reading: an activity at morning to read loudly at classroom<br>* Reading headlines, Reading stories, reading riddles, reading thoughts, reading passages, reading cards | June – March<br><br>9:15 to 9:45 | Class teacher | P T.A.<br>S.S.K. |
| Improve writing skills without mistake | * Stars and creative zone: to present creative writing of children<br>* Let's introduce: writing about a picture, things, drawing<br>* Fun time funda: write the simple puzzles, riddles, stories, poems and present it in the classroom.<br>* Find words, rhyming words, word chain, rearrange the sentences, add more lines to the song, English diary writing, write the words, simple sentences, riddles etc | Once in a week<br><br>English period | Class teacher | |

| | | | | |
|---|---|---|---|---|
| To improve the ability to use communication media | * Digitask: Video clip<br>* Using ICT | June – March | Class teacher | PTA, LSG |